1. ಕೊಡಗು ಜಿಲ್ಲೆಯಲ್ಲಿರುವ ಗಿರಿಜನರ ಸಂಖ್ಯೆ ಎಷ್ಟು ?(ತಾಲ್ಲೂಕುವಾರು ವಿವರ ಒದಗಿಸುವುದು)
2. ಇವರ ಪೈಕಿ ಸ್ವಂತ ಮನೆ ಮತ್ತು ಆಸ್ತಿ ಹೊಂದಿರುವವರ ಸಂಖ್ಯೆ ಎಷ್ಟು ?
3. ಇವರ ಪೈಕಿ ಕಂದಾಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ ಎಷ್ಟು ? ಮತ್ತು ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ ಎಷ್ಟು ?
4. ಅರಣ್ಯದ ಕೆಲಸ ಮಾಡಿಸುತ್ತಿರುವುದು ನಿಜವೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :

ಅ)

ಕೊಡಗು ಜಿಲ್ಲೆಯ ಗಿರಿಜನರ ಸಂಖ್ಯೆ	36877
1. ಮಡಿಕೇರಿ ತಾಲ್ಲೂಕು	4635
2. ಸೋಮವಾರಪೇಟೆ ತಾಲ್ಲೂಕು	5062
3. ವಿರಾಜಪೇಟೆ ತಾಲ್ಲೂಕು	27180

ಆ)

1. ಸ್ವಂತ ಮನೆಯನ್ನು ಹೊಂದಿರುವವರ ಸಂಖ್ಯೆ	5484
2. ಸ್ವಂತ ಆಸ್ತಿಯನ್ನು ಹೊಂದಿರುವವರ ಸಂಖ್ಯೆ	1054

ಇ)

1) ಕಂದಾಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ	837
2) ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ	217

ಈ) -ಹೌದು-

ಚಿಕ್ಕಮಗಳೂರು ಅರಣ್ಯ ಇಲಾಖೆಯಲ್ಲಿ ಇತ್ಯರ್ಥವಾಗದಿರುವ ದರಖಾಸ್ತು ಅರ್ಜಿಗಳ ಸಂಖ್ಯೆ

2247 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಇಲಾಖೆಯಲ್ಲಿ ಇತ್ಯರ್ಥವಾಗದೆ ಇರುವ ದರಖಾಸ್ತು ಅರ್ಜಿಗಳೆಷ್ಟು ?

ಆ) ಯಾವ ಯಾವ ವರ್ಗದ ಜನರಿಂದ ದರಖಾಸ್ತು ರೆಕಾರ್ಡ್‌ಗಳ ಸಂಖ್ಯೆ ಎಷ್ಟು ? ಯಾವ ವರ್ಷದವುಗಳಾಗಿರುತ್ತವೆ ?

ಇ) ಬಡವರ ದರಖಾಸ್ತು ರೆಕಾರ್ಡುಗಳನ್ನು ಮಾತ್ರ ಅರಣ್ಯ ಇಲಾಖೆಯಲ್ಲಿ ಇತ್ಯರ್ಥವಾಗದೆ ಇರಲು ಕಾರಣವೇನು ?

ಶ್ರೀ ಇ.ಟಿ. ಶಂಬುನಾಥ್ (ರಾಜ್ಯ ಅರಣ್ಯ ಸಚಿವರು) :

ಅ) 434 ಪ್ರಕರಣಗಳು

ಆ) 1) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ 171

2) ಇತರೆ 263

ಒಟ್ಟು 434

		85-86	86-87	87-88	88-89	89-90	90-91	91-92	ಒಟ್ಟು
1)	ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ	4	10	38	39	42	33	5	171
2)	ಇತರೆ	42	42	35	53	40	31	20	263
ಒಟ್ಟು		46	52	73	92	82	64	25	434

ಇ) ಕೆಲವೊಂದು ದರಖಾಸ್ತು ಪ್ರದೇಶಗಳ ಬಗ್ಗೆ ಕಂದಾಯ ಮತ್ತು ಅರಣ್ಯ ಇಲಾಖೆಯ ಜಂಟಿ ಮೋಜಣಿ ಕಾರ್ಯ ಮತ್ತು ಕೆಲವೊಂದು ಪ್ರಕರಣಗಳಲ್ಲಿ ತಪಾಸಣೆ ಹಾಗೂ ದರಖಾಸ್ತು ಜಮೀನುಗಳಲ್ಲಿರುವ ಮರ ಮೂಲ್ಯ ಎನ್ಯುಮರೇಷನ್ ನಡೆಯುತ್ತಿರುವುದರಿಂದ ದರಖಾಸ್ತು ಕಡತಗಳು ಬಾಕಿ ಉಳಿದಿರುತ್ತವೆ. ವಿನಃ ಬಡವರ ಅಥವಾ ಶ್ರೀಮಂತರ ರೆಕಾರ್ಡುಗಳೆಂದು ಪರಿಗಣಿಸಿ ತಾರತಮ್ಯ ಮಾಡಿಲ್ಲ.

ಮೂಡಿಗೆರೆ ತಾಲ್ಲೂಕಿನ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನರಿಗೆ ಮಂಜೂರಾದ ಸರ್ಕಾರಿ ಭೂಮಿ ಬೇರೆಯವರಿಂದ ಒತ್ತುವರಿಯಾಗಿರುವುದು

2246 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನರಿಗೆ ಮಂಜೂರಾದ ಸರ್ಕಾರಿ ಭೂಮಿ ಬೇರೆಯವರಿಂದ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

3) ಸರ್ಕಾರ ಒತ್ತುವರಿ ಜಮೀನನ್ನು ಸಕ್ರಮ ಮಾಡುವಾಗ, ಈ ವರ್ಗದ ಜನರಿಗೆ ತೊಂದರೆಯಾಗುವುದಿಲ್ಲವೆ ; ಇದರ ಬಗ್ಗೆ ಸರ್ಕಾರದ ಕ್ರಮ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

1) ಹೌದು.

2) ಒತ್ತುವರಿದಾರರನ್ನು ಜಮೀನಿನಿಂದ ಹೊರದೂಡಲು ಕ್ರಮ ಕೈಗೊಳ್ಳಲಾಗಿದೆ.

3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನರಿಗೆ ಮಂಜೂರಾಗಿರುವ ಜಮೀನುಗಳನ್ನು ಒತ್ತುವರಿ ಮಾಡುವ ಇತರೆ ಜನರಿಗೆ ಸಕ್ರಮಗೊಳಿಸಲಾಗುವುದಿಲ್ಲ.

ಬೀದರ್ ಜಿಲ್ಲೆಗೆ ಪ್ರತ್ಯೇಕವಾಗಿ ಹಾಲು ಮಹಾಮಂಡಳಿ ಸ್ಥಾಪನೆ

2253 - ಶ್ರೀ ಗುರುಪಾದಪ್ಪ ನಾಗರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಹಾಲು ಮಹಾ ಮಂಡಳಿಗೆ ಪ್ರತಿದಿನ ಬೀದರ್‌ನಿಂದ ಸರಬರಾಜಾಗುವ ಹಾಲಿನ ಪ್ರಮಾಣವೆಷ್ಟು? ಹಾಗೂ ಗುಲ್ಬರ್ಗದಿಂದ ಸರಬರಾಜಾಗುವ ಹಾಲಿನ ಪ್ರಮಾಣವೆಷ್ಟು?